ಅಥವಾ 0.2 ಮಿ. ಲೀ. ಸ್ಪೈನೋಸ್ಯಾಡ್ 48 ಎಸ್.ಸಿ. ಅಥವಾ 0.25 ಗ್ರಾಂ. ಇಮಾಮೆಕ್ಟಿನ್ ಬೆಂಜೋಯೇಟ್ 5 ಎಸ್.ಜಿ. ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು. ಇತರೆ ಕೀಟನಾಶಕಗಳಾದ 3 ಗ್ರಾಂ. ಕಾರ್ಬರಿಲ್ 50 ಡಬ್ಲ್ಯು.ಪಿ. ಅಥವಾ 2.5 ಮಿ. ಲೀ ಮೊನೊಕ್ರೋಟೋಫಾಸ್ 36 ಎಸ್.ಎಲ್. ಅಥವಾ 2 ಮಿ. ಲೀ. ಕ್ವಿನಾಲ್‌ಫಾಸ್ 25 ಇ. ಸಿ. ಅಥವಾ 2.5 ಮಿ. ಲೀ. ಕ್ಲೋರ್‌ಪೈರಿಫಾಸ್ 20 ಇ. ಸಿ. ಯನ್ನು ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬಹುದು.

- ಪೈರಿಥ್ರಾಯಿಡ್ ಕೀಟನಾಶಕಗಳಾದ 0.5 ಮಿ. ಲೀ ಡೆಲ್ಟಾಮೆಥ್ರಿನ್ 2.8 ಇ.ಸಿ. ಅಥವಾ 0.5 ಮಿ. ಲೀ. ಸೈಪರಮೆಥ್ರಿನ್ 10 ಇ. ಸಿ. ಅಥವಾ 0.5 ಮಿ. ಲೀ. ಫೆನವಲರೇಟ್ 10 ಇ. ಸಿ. ಅಥವಾ 0.5 ಮಿ.ಲೀ ಲ್ಯಾಂಬ್ಡಾಸೈಹಲೋಥ್ರಿನ್ 2.5 ಇ. ಸಿ. ಪ್ರತಿ ಲೀ. ನೀರಿನಲ್ಲಿ ಬೆರೆಸಿ ಬಿತ್ತನೆಯಾದ 100 ದಿನಗಳ ನಂತರ ಅವಶ್ಯಕತೆಗನುಸಾರವಾಗಿ ಸಿಂಪಡಿಸಬೇಕು. ಸಿಂಥೆಟಿಕ್ ಪೈರಿಥ್ರಾಯಿಡ್ ಕೀಟನಾಶಕಗಳನ್ನು ಕೇವಲ ಒಂದು ಅಥವಾ ಎರಡು ಸಲ ಮಾತ್ರ 15-20 ದಿನಗಳ ಅಂತರದಲ್ಲಿ ಸಿಂಪಡಿಸಬೇಕು. ಪ್ರತಿ ಹೆಕ್ಟೇರಿಗೆ 1000-1250 ಲೀ. ಸಿಂಪರಣಾ ದ್ರಾವಣ ಬೇಕಾಗುತ್ತದೆ.
- ಹಿಲಿಯೋಥಿಸ್ ಕಾಯಿಕೊರಕದ ಸಣ್ಣ ಕೀಡೆಗಳು ಕಂಡು ಬಂದರೆ ಪ್ರತಿ ಎಕರೆಗೆ 200 ಎಲ್‌ಇ/ಎನ್.ಪಿ.ವಿ. ನಂಜಾಣು ಜೊತೆಗೆ ಶೇ. 5 ರ ಬೆಲ್ಲದ ನೀರು ಮತ್ತು ಶೇ. 0.1 ರೋಬಿನ್ ಅಥವಾ ಟೀಪಾಲ್ ಸಿಂಪಡಿಸಬೇಕು. ಎನ್.ಪಿ.ವಿ.ಯನ್ನು ತಂಪು ವಾತಾವರಣವಿದ್ದಾಗ ಸಿಂಪರಣೆ ಮಾಡಿದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ.
- 110-130 ದಿನಗಳ ಬೆಳೆಗೆ ಪೈರಿಥ್ರಾಯಿಡ್ ಕೀಟನಾಶಕವನ್ನು ಒಂದು ಸಲ ಸಿಂಪರಣೆ ಮಾಡಿದರೆ ಬಿಟಿ ಹತ್ತಿಗೆ ನಿರೋಧಕ ಶಕ್ತಿ ಹೊಂದಿದ ಹಿಲಿಯೋಥಿಸ್ ಮತ್ತು ಗುಲಾಬಿ ಕಾಯಿಕೊರಕ ಕೀಡೆಗಳನ್ನು ಸಮರ್ಪಕವಾಗಿ ನಿರ್ವಹಿಸಬಹುದು.

ಗುಲಾಬಿ ಕಾಯಿಕೊರಕ: ಗುಲಾಬಿ ವರ್ಣದ ಮರಿಹುಳು, ಮೊಗ್ಗು, ಹೂ ಮತ್ತು ಬೆಳೆಯುವ ಹಂತದ ಕಾಯಿಗಳನ್ನು ಬಾಧಿಸುತ್ತದೆ. ಬಾಧಿತ ಹೂಗಳು ಬುಗುರಿಯ ಆಕಾರಕ್ಕೆ ತಿರುಗುತ್ತವೆ. ಈ ಕೀಟವು ಎಳೆಯ ಕಾಯಿಗಳಲ್ಲಿ ಸೇರಿಕೊಂಡು ಬೀಜಗಳನ್ನು ತಿನ್ನುತ್ತದೆ. ಕಾಯಿ ಒಡೆದ ನಂತರ ಮಾತ್ರ ಬಾಧೆಗೊಳಗಾದ ಕಾಯಿಗಳು ಇರುವಿಕೆ ತಿಳಿಯುತ್ತದೆ.

ಗುಲಾಬಿ ಕಾಯಿಕೊರಕದ ನಿರ್ವಹಣೆಗಾಗಿ ವಿಶೇಷ ಕ್ರಮಗಳು:

ಈ ಕೀಟದ ಸಮೀಕ್ಷೆಗಾಗಿ ಪ್ರತಿ ಹೆಕ್ಟೇರಿಗೆ 5 ರಂತೆ ಲಿಂಗಾಕರ್ಷಕ ಬಲೆಗಳನ್ನು ನೆಡಬೇಕು. ಇದಕ್ಕೆ [illegible] ದಿವಸಕ್ಕೊಮ್ಮೆ ಲ್ಯೂರ್‌ಗಳನ್ನು ಬದಲಾಯಿಸಬೇಕು. ಕೀಟ ನಿಯಂತ್ರಣಕ್ಕಾಗಿ ಹತ್ತಿ ಬೆಳೆಯು 35-40 ದಿನಗಳಾದಾಗ ಪ್ರತಿ ಹೆಕ್ಟೇರಿಗೆ 200 ರಂತೆ ಪಿ.ಬಿ.ರೋಪ್ ಎಲ್ ತಂತಿಗಳನ್ನು ಸಾಲಕ್ಕೆ ಕಟ್ಟಬೇಕು. ಪ್ರತಿ 50 ಚದರ ಮೀಟರ್‌ಗೆ ಒಂದು ಕಂತೆ ಬಲೆಯಂತೆ ಸಮನಾಗಿ ಕಟ್ಟಬೇಕು. ಈ ಕೀಟದ ಗಂಡು ಪತಂಗಗಳನ್ನು ಸಾಮೂಹಿಕವಾಗಿ ಆಕರ್ಷಿಸಿ ನಾಶಪಡಿಸಲು ಪ್ರತಿ ಹೆಕ್ಟೇರಿಗೆ 30 ರಂತೆ ಮೋಹಕ ಬಲೆಗಳನ್ನು ಸಮಾನಾಂತರವಾಗಿ ಅಳವಡಿಸಬೇಕು. ಬಲೆಗೆ ಬಿದ್ದ ಪತಂಗಗಳನ್ನು ಸಾಯಿಸಲು ಡಿ.ಡಿ.ವಿ.ಪಿ ಕೀಟನಾಶಕದಲ್ಲಿ ಅದ್ದಿದ ಅರಳೆಯನ್ನು ಬಲೆಯಲ್ಲಿ ಇಡಬೇಕು. ಮೋಹಕ ಬಲೆಗಳು ಬೆಳೆಯ ಮಟ್ಟದಿಂದ 15 ಸೆಂ.ಮೀ. ಎತ್ತರದಲ್ಲಿರಬೇಕು. ಪ್ರತಿ 20 ದಿನಗಳಿಗೊಮ್ಮೆ ಲ್ಯೂರ್‌ಗಳನ್ನು ಬದಲಾಯಿಸಬೇಕು. ಈ ರೀತಿಯ ಸಮೂಹವಾಗಿ ಕ್ರಮವು ಎಲ್ಲ ಕಾಯಿಗಳು ಬಲಿಯುವ ಹಂತದವರೆಗೆ ನಿರಂತರವಾಗಿರಬೇಕು.

[illegible]

- 100 ದಿನಗಳ ಅವಧಿಗಿಂತ ಮುಂಚಿನ ಬೆಳೆಯಲ್ಲಿ 2 ಮಿ.ಲೀ. ಪ್ರೊಫೆನೋಫಾಸ್ 50 ಇ.ಸಿ. ಅಥವಾ 2 ಮಿ.ಲೀ. ಟ್ರಿಯಾಜೋಫಾಸ್ ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.
- 100 ದಿನಗಳ ಅಂತರದ ಬೆಳೆಯಲ್ಲಿ ಅವಶ್ಯಕತೆಗನುಸಾರವಾಗಿ 0.5 ಮಿ.ಲೀ. ಲ್ಯಾಂಬ್ಡಾಸೈಹಲೋಥ್ರಿನ್ ಅಥವಾ 0.5 ಮಿ.ಲೀ. ಸೈಪರ್‌ಮೆಥ್ರಿನ್ 10 ಇ.ಸಿ. ಪ್ರತಿ ಲೀ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.
- ಜಿನ್ನಿಂಗ್ ಮಾಡಿದ ನಂತರ ಬಾಧೆಗೆ ತುತ್ತಾದ ಹತ್ತಿ ಬೀಜಗಳನ್ನು ನಾಶ ಪಡಿಸಬೇಕು.

ಹತ್ತಿ ಬೆಳೆಯ ರೋಗಗಳು ಹಾಗೂ ನಿರ್ವಹಣಾ ಕ್ರಮಗಳು

ಸಸಿ ಸಾಯುವಿಕೆ

ರೋಗದ ಲಕ್ಷಣ: ಸಸಿಗಳು ಬಾಡಿ, ಬೇರುಗಳ ಸಿಪ್ಪೆ ಒಣಗುತ್ತದೆ. ಕೆಲವು ಸಲ ಸಾವಯವಯುಕ್ತ ಶಿಲೀಂದ್ರದ ಗಟ್ಟಿ ಕಾಯಗಳು ಬೇರುಗಳ ಮೇಲೆ ಕಂಡುಬರುತ್ತವೆ.

ನಿರ್ವಹಣಾ ಕ್ರಮಗಳು: 2 ಗ್ರಾಂ. ಥೈರಾಮ್ 75 ಡಬ್ಲ್ಯು.ಪಿ. ಶಿಲೀಂದ್ರನಾಶಕವನ್ನು ಪ್ರತಿ ಲೀ. ನೀರಿಗೆ ಬೆರೆಸಿ ರೋಗ ಪೀಡಿತ ಸಸಿಗಳ ಸುತ್ತಲೂ ಮಣ್ಣಿನಲ್ಲಿ ಸೇರಿಸಬೇಕು.

[illegible] ರೋಗ

ರೋಗದ ಲಕ್ಷಣ: ಶಿಲೀಂದ್ರದ ಬಿಳಿ ಪುಡಿಯಂಥ ಬೆಳವಣಿಗೆ ಎಲೆಗಳ ಕೆಳಭಾಗದಲ್ಲಿ ಕಂಡು ಬಂದು, ರೋಗದ ತೀವ್ರತೆ ಹೆಚ್ಚಾದಾಗ ಎಲೆಗಳು ಉದುರುತ್ತವೆ.

ನಿರ್ವಹಣಾ ಕ್ರಮಗಳು: ಒಂದು ಗ್ರಾಂ. ಕಾರ್ಬೆಂಡೈಜಿಮ್ 50 ಡಬ್ಲ್ಯು.ಪಿ. ಶಿಲೀಂದ್ರನಾಶಕವನ್ನು ಪ್ರತಿ ಲೀ. ನೀರಿನಲ್ಲಿ ಕಲಸಿ ಸಿಂಪಡಿಸಬೇಕು.

[illegible] ರೋಗ

ರೋಗದ ಲಕ್ಷಣ: ಕೋನಾಕಾರದ ಹಸಿ ಚುಕ್ಕೆಗಳು ಎಲೆಗಳ ಮೇಲೆ ಕಾಣಿಸಿಕೊಂಡು, ನಂತರ ನರಗಳ ಮೇಲೂ ಪಸರಿಸುತ್ತವೆ. ಆಮೇಲೆ ಟೊಂಗೆಗಳ ಮೇಲೆಯೂ ರೋಗದ ಲಕ್ಷಣಗಳು ಕಂಡುಬರುತ್ತವೆ.

ನಿರ್ವಹಣಾ ಕ್ರಮಗಳು: 0.5 ಗ್ರಾಂ. ಸ್ಟ್ರೆಪ್ಟೋಸೈಕ್ಲಿನ್ ಸಲ್ಫೇಟ್ ಮತ್ತು 3 ಗ್ರಾಂ. ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯು.ಪಿ. ಮಿಶ್ರಣವನ್ನು ಪ್ರತಿ ಲೀ. ನೀರಿನಲ್ಲಿ ಕಲಸಿ ಸಿಂಪಡಿಸಬೇಕು.

ಕಂದು ಎಲೆಚುಕ್ಕೆ ರೋಗ

ರೋಗದ ಲಕ್ಷಣ: ವೃತ್ತಾಕಾರದ ಸುರುಳಿಗಳಿಂದ ಕಂದು ಬಣ್ಣದ ಚುಕ್ಕೆಗಳು ಬೆಳೆದು ದೊಡ್ಡದಾಗಿ ಎಲೆಯ ಭಾಗಗಳನ್ನು ಆಕ್ರಮಿಸುತ್ತವೆ.

ನಿರ್ವಹಣಾ ಕ್ರಮಗಳು: 3.5 ಗ್ರಾಂ. ಮೆಟಿರಾಮ್ 55% ಮತ್ತು ಪೈರಾಕ್ಲೋಸ್ಟ್ರೋಬಿನ್ 5% ಡಬ್ಲ್ಯು.ಜಿ. ಇವುಗಳನ್ನೊಳಗೊಂಡ ಸಂಯುಕ್ತ ಶಿಲೀಂದ್ರನಾಶಕವನ್ನು ರೋಗ ಕಂಡ ತಕ್ಷಣ ಪ್ರತಿ 15 ದಿನಗಳ ಅಂತರದಲ್ಲಿ 3 ಬಾರಿ ಸಿಂಪಡಿಸಬೇಕು ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯು.ಪಿ. ಅಥವಾ 2 ಗ್ರಾಂ ಮ್ಯಾಂಕೋಜೆಬ್ 75 ಡಬ್ಲ್ಯು.ಪಿ ಅಥವಾ ಪ್ರತಿ ಲೀ. ನೀರಿನಲ್ಲಿ ಕಲಸಿ ಸಿಂಪಡಿಸಬೇಕು.

ತುಕ್ಕು ರೋಗ

ರೋಗದ ಲಕ್ಷಣ: ಎಲೆ ಕೆಳ ಭಾಗದಲ್ಲಿ ಕಂದು ಬಣ್ಣದ ಬೊಕ್ಕೆಗಳ ರೂಪದಲ್ಲಿ ಲಕ್ಷಣಗಳು ಆರಂಭವಾಗಿ ಎಲೆಗಳ ಒಳಭಾಗ ಆಕ್ರಮಿಸಿಕೊಳ್ಳುವವು. ರೋಗದಿಂದ ಬಾಧಿತ ಎಲೆಗಳು ಉದುರುತ್ತವೆ.

ನಿರ್ವಹಣಾ ಕ್ರಮಗಳು: ಮೊದಲನೇ ಸಿಂಪರಣೆಯಾಗಿ 2 ಗ್ರಾಂ. ಕ್ಲೋರೋಥಲೋನಿಲ್ 75 ಡಬ್ಲ್ಯು. ಪಿ. ಇದಾದ 15 ದಿನಗಳ ನಂತರ ಎರಡನೆಯ ಸಿಂಪರಣೆಯಾಗಿ 5 ಗ್ರಾಂ. [illegible] ಹಾಗೂ ಮೂರನೇ ಸಿಂಪರಣೆಯಾಗಿ ಮತ್ತೆ 2 ಗ್ರಾಂ. ಕ್ಲೋರೋಥಲೋನಿಲ್ 75 ಡಬ್ಲ್ಯು.ಪಿ. ಪ್ರತಿ ಲೀ. ನೀರಿನಲ್ಲಿ ಕಲಸಿ ಸಿಂಪಡಿಸಬೇಕು.

ಸಿಡಿ ರೋಗ

ರೋಗದ ಲಕ್ಷಣ: ಗಿಡಗಳು ಬಾಡಿ ಒಣಗುತ್ತವೆ.

ನಿರ್ವಹಣಾ ಕ್ರಮಗಳು: 2 ಗ್ರಾಂ. ಕಾರ್ಬೆಂಡೈಜಿಮ್ 50 ಡಬ್ಲ್ಯು. ಪಿ. ಶಿಲೀಂದ್ರನಾಶಕವನ್ನು ಪ್ರತಿ ಲೀ. ನೀರಿನಲ್ಲಿ ಕಲಸಿ ತಯಾರಿಸಿದ ದ್ರಾವಣವನ್ನು ರೋಗ ಪೀಡಿತ ಗಿಡಗಳ ಸುತ್ತಲೂ ಮಣ್ಣಿನಲ್ಲಿ ಮತ್ತು ಸುತ್ತಲಿನ ಗಿಡಗಳ ಮಣ್ಣಿನಲ್ಲಿ ಸೇರಿಸಬೇಕು.

ರೋಗದ ಲಕ್ಷಣ: ಕಾಯಿಗಳು ಕೊಳೆತು, ಬೂಷ್ಟ್ ಬೆಳೆದು ಕಂದುಬಣ್ಣ ನೋಡ ಕಾಣಿಸಿಕೊಳ್ಳುವುದು.

ನಿರ್ವಹಣಾ ಕ್ರಮಗಳು: ಕಾಯಿ ಕೊರಕದ ಸಿಂಪಡಣೆಯ ಕೀಟನಾಶಕಗಳ ಜೊತೆ 3 ಗ್ರಾಂ. ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯು.ಪಿ. ಮತ್ತು 0.5 ಗ್ರಾಂ. ಸ್ಟ್ರೆಪ್ಟೋಸೈಕ್ಲಿನ್ ಸಲ್ಫೇಟ್ ಅಥವಾ 2 ಗ್ರಾಂ. ಮ್ಯಾಂಕೋಜೆಬ್ 75 ಡಬ್ಲ್ಯು. ಪಿ. ಅಥವಾ 2 ಗ್ರಾಂ. ಕ್ಲೋರೋಥಲೋನಿಲ್ 75 ಡಬ್ಲ್ಯು.ಪಿ. ಪ್ರತಿ ಲೀ. ನೀರಿಗೆ ಸೇರಿಸಿ ಸಿಂಪಡಿಸಬೇಕು.

ಇಳುವರಿ

ನೀರಾವರಿ–15–20 ಕ್ವಿಂ/ಎ

ಮಳೆ–10–12 ಕ್ವಿಂ/ಎ

ಲೇಖಕರು

ಶ್ರೀ. ಜೆ.ಡಿ. ವಿಶ್ವನಾಥ
ವಿಜ್ಞಾನಿಗಳು (ಬೇಸಾಯ ಶಾಸ್ತ್ರ)

ಶ್ರೀ. ಎಸ್.ಎಂ. ವಾರದ
ವಿಜ್ಞಾನಿಗಳು (ಮಣ್ಣು ವಿಜ್ಞಾನ)

ಶ್ರೀಮತಿ. ಶ್ರೀದೇವಿ
ವಿಜ್ಞಾನಿಗಳು (ಗೃಹ ವಿಜ್ಞಾನ)

ಡಾ.ಎಸ್.ಎಸ್. ಹಿರೇಮಠ
ವಿಜ್ಞಾನಿಗಳು (ಸಸ್ಯ ಸಂರಕ್ಷಣೆ)

ಶ್ರೀ. ಪ್ರವೀಣ ಯಡಹಳ್ಳಿ
ವಿಜ್ಞಾನಿಗಳು (ತೋಟಗಾರಿಕೆ)

ಸಂಪಾದಕರು

ಶ್ರೀ. ಬಿ.ಆರ್. ಪಾಟೀಲ
ಅಧ್ಯಕ್ಷರು,
ಐಸಿಎಆರ್ – ಕೆಎಲ್‌ಇ ಕೆವಿಕೆ, ಮತ್ತಿಕೊಪ್ಪ

ಪುಟ ವಿನ್ಯಾಸ

ಶ್ರೀ. ಮಂಜುನಾಥ ಪಿ.ಬಿ.
ಗಣಕಯಂತ್ರ ಸಹಾಯಕರು

ಅಕ್ಷರ ಜೋಡಣೆ

ಶ್ರೀಮತಿ. ವೀಣಾ ಬನ್ನೂರು
ಬೆರಳಚ್ಚುಗಾರರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
ಐಸಿಎಆರ್-ಕೆಎಲ್‌ಇ ಕೃಷಿ ವಿಜ್ಞಾನ ಕೇಂದ್ರ
ಮತ್ತಿಕೊಪ್ಪ-591 147
ತಾಲೂಕ: ಬೈಲಹೊಂಗಲ, ಜಿಲ್ಲೆ: ಬೆಳಗಾವಿ
ದೂರವಾಣಿ ಸಂಖ್ಯೆ: 9535604747
ಮಿಂಚಂಚೆ:kvk.Belagavi2@icar.gov.in,
ಅಂತರ್ಜಾಲ:www.klekvk.org

Shri Bhavani Hubli # 94481 16253

ಕೆಎಲ್‌ಇ ಸಂಸ್ಥೆಯ

ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ

ಮತ್ತಿಕೊಪ್ಪ-591 147,

ಬೈಲಹೊಂಗಲ ತಾಲೂಕು, ಬೆಳಗಾವಿ ಜಿಲ್ಲೆ

ಹತ್ತಿ ಬೆಳೆಯ ನೂತನ ಬೇಸಾಯ ತಂತ್ರಜ್ಞಾನಗಳು



ಪ್ರತಿಗಳು: 500

2019-20

ಹತ್ತಿ ಬೆಳೆಯ ಸುಧಾರಿತ ಬೇಸಾಯ ತಂತ್ರಜ್ಞಾನಗಳು



ಬಿಳಿ ಚಿನ್ನ ಎಂದು ಕರೆಯಲ್ಪಡುವ ಹತ್ತಿ ಬೆಳೆಯು ಬೆಳಗಾವಿ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು ರೈತರ ಆರ್ಥಿಕ ಮಟ್ಟ ಸುಧಾರಣೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ. ಜಿಲ್ಲೆಯಲ್ಲಿ ಮಳೆಯಾಶ್ರಿತ ಮತ್ತು ನೀರಾವರಿಯಲ್ಲಿ ಹತ್ತಿಯನ್ನು ಬೆಳೆಯಲಾಗುತ್ತಿದೆ. 2002 ರಿಂದೀಚೆಗೆ ಬಿಟಿ ಹತ್ತಿ ಕ್ಷೇತ್ರ ಗಮನಾರ್ಹ ಹೆಚ್ಚಳವಾಗಿ ಚೇತರಿಸಿಯಾಗಿ ಇಳುವರಿಯೂ ಹೆಚ್ಚಿದೆ. 2002 ರ ನಂತರ ಕುಲಾಂತರಿ (ಬಿಟಿ) ಹೈಬ್ರಿಡ್ ಹತ್ತಿಯ ಆವಿಷ್ಕಾರದಿಂದ ಜಿಲ್ಲೆಯ ವೈವಿಧ್ಯಮಯ ಕೃಷಿ ವಲಯಗಳಲ್ಲಿ ಲಾಭದಾಯಕ ಬೆಳೆಯಾಗಿ ಬೆಳೆಯಲು ಸಾಧ್ಯವಾಗಿದೆ. ಇದನ್ನು "ಬಿಳಿ ಬಂಗಾರ" ಮತ್ತು "ನಾರುಗಳ ರಾಜ" ಎಂದು ಕರೆಯುತ್ತಾರೆ. ಬೆಳಗಾವಿಯಲ್ಲಿ ಜಿಲ್ಲೆಯಲ್ಲಿ ಈ ಬೆಳೆಯನ್ನು 54,695 ಹೆ. ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು ಒಟ್ಟು ಅರಳೆ ಉತ್ಪಾದನೆ 74,896 ಬೇಲ್ ಇದ್ದು ಉತ್ಪಾದಕತೆ ಪ್ರತಿ ಹೆ. 427 ಕಿ.ಗ್ರಾಂ. ಇರುವುದು.

ಬೀಜೋಪಚಾರ

ಬಿತ್ತನೆಗೆ ಮುಂಚಿತವಾಗಿ ಬೀಜ ಪಾಲಿಮರ್ (8 ಮಿ.ಲೀ. ಪ್ರತಿ ಕಿ.ಗ್ರಾಂ. ಬೀಜಕ್ಕೆ) ಮೂಲಕ ಲಘುಪೋಷಕಾಂಶಗಳಾದ ಸತುವಿನ ಸಲ್ಫೇಟ್, ಕಬ್ಬಿಣದ ಸಲ್ಫೇಟ್, ಮ್ಯಾಂಗನೀಸ್ ಸಲ್ಫೇಟ್ ಮತ್ತು ಮೆಗ್ನೀಸಿಯಂ ಸಲ್ಫೇಟ್‌ಗಳನ್ನು ಪ್ರತಿ ಒಂದು ಕಿ.ಗ್ರಾಂ. ಬೀಜಕ್ಕೆ 4.0 ಗ್ರಾಂ ನಂತೆ ಲೇಪನ ಮಾಡುವುದು.

ಗೊಬ್ಬರ ಬಳಕೆ

ಸಾವಯವ ಗೊಬ್ಬರಗಳು (ಪ್ರತಿ ಎಕರೆಗೆ) 4 ಟನ್
ಅ. ನೀರಾವರಿ
ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್
ಅಥವಾ
ಕೋಳಿ ಗೊಬ್ಬರ 0.8 ಟನ್
ಅಥವಾ
ಕೊಟ್ಟಿಗೆ ಗೊಬ್ಬರ + ಸಸ್ಯಜನ್ಯ + ಎರೆಗೊಬ್ಬರ 1.2 ಟನ್ + 0.8 ಟನ್ + 0.4 ಟನ್ (ಬಿತ್ತನೆಗೆ 2 ವಾರ ಮೊದಲು) + (ಬಿತ್ತುವಾಗ)

ಹತ್ತಿ ಬಿತ್ತುವ 2–3 ವಾರಗಳ ಮೊದಲು ಪ್ರತಿ ಎಕರೆಗೆ 4 ಟನ್ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನಲ್ಲಿ ಬೆರೆಸಿ, ಎರಡು ಹತ್ತಿ ಸಾಲುಗಳ ಮಧ್ಯ ಸೆಣಬು ಬೆಳೆದು 30 ದಿನಗಳ ನಂತರ ಮಣ್ಣಿನಲ್ಲಿ ಸೇರಿಸುವುದರಿಂದ (ಹಸಿರು ಹೊದಿಕೆಯಾಗುವುದು) ಮಣ್ಣಿನ ಫಲವತ್ತತೆ ಹೆಚ್ಚಾಗುವುದಲ್ಲದೆ ಕಳೆ ನಿಯಂತ್ರಣವಾಗಿ ಶಿಫಾರಸಿತ ಶೇ. 50 ರಷ್ಟು ರಸಗೊಬ್ಬರವನ್ನು ಉಳಿತಾಯ ಮಾಡಬಹುದು.

ಬ. ಖುಷ್ಕಿ
ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ 2 ಟನ್

ಜೀವಾಣುಗೊಬ್ಬರ

ಅ. ಜೈವಿಕ ಗೊಬ್ಬರ

1. ಪ್ರತಿ ಎಕರೆಗೆ ಬೇಕಾಗುವ ಬೀಜಕ್ಕೆ ತಲಾ 200 ಗ್ರಾಂ ಅಜೋಸ್ಪಿರಿಲಂ ಹಾಗೂ ರಂಜಕ ಕರಗಿಸುವ ಬ್ಯಾಕ್ಟೀರಿಯಾ ಜೀವಾಣು ಗೊಬ್ಬರ ಬೀಜೋಪಚಾರದಿಂದ ಶಿಫಾರಸ್ಸು ಮಾಡಿದ ರಸಗೊಬ್ಬರದಲ್ಲಿ 8 ಕಿ.ಗ್ರಾಂ. ಸಾರಜನಕ ಹಾಗೂ 4 ಕಿ.ಗ್ರಾಂ. ರಂಜಕ ಉಳಿತಾಯ ಮಾಡಬಹುದು.
2. ಪ್ರತಿ ಕಿ.ಗ್ರಾಂ. ಬೀಜವನ್ನು 10 ಗ್ರಾಂ. ಇಮಿಡಾಕ್ಲೋಪ್ರಿಡ್ 75 ಡಬ್ಲ್ಯು.ಎಸ್ ಅಥವಾ 5 ಗ್ರಾಂ. ಥಯಾಮಿಥಾಕ್ಸಾಮ್ 70 ಡಬ್ಲ್ಯು.ಎಸ್ ದಿಂದ ಬೀಜೋಪಚಾರ ಮಾಡುವುದರಿಂದ ರಸಹೀರುವ ಕೀಟಗಳನ್ನು 35–40 ದಿನಗಳವರೆಗೆ ನಿಯಂತ್ರಿಸಬಹುದು.

ಪ್ರದೇಶ	ಪ್ರತಿ ಎಕರೆಗೆ ಶಿಫಾರಸು ಮಾಡಿದ ಪೋಷಕಾಂಶಗಳ ಪ್ರಮಾಣ (ಕಿ.ಗ್ರಾಂ.)		
1. ಮಳೆಯಾಶ್ರಿತ ತಳಿ	ಸಾರಜನಕ	ರಂಜಕ	ಪೊಟ್ಯಾಷ್
ಅ. ಖುಷ್ಕಿ ಪ್ರದೇಶ (ವಲಯ 2,3)	12	6	6
ಆ. ಅರೆಮಲೆನಾಡು ಪ್ರದೇಶ (ವಲಯ 8)	16	10	10
2. ಮಳೆಯಾಶ್ರಿತ ಹೈಬ್ರಿಡ್			
ಅ. ಮಲೆನಾಡು ಪ್ರದೇಶ (ವಲಯ 9)	40	40	40
ಆ. ಅರೆಮಲೆನಾಡು ಪ್ರದೇಶ (ವಲಯ 8)	32	16	16
ಇ. ಬಿಟಿ ಹತ್ತಿ	40	20	20
ಈ. ಬಿಟಿ ಹತ್ತಿ (ವಿಜಾತಿ)*	50	25	25
3. ನೀರಾವರಿ ಹತ್ತಿ			
ಅ. ಹೈಬ್ರಿಡ್: ವಿಜಾತಿ	60	30	30
ಸಜಾತಿ	48	24	24
ಹೈಬ್ರಿಡ್ ಬಿಟಿ ಹತ್ತಿ– ಸಜಾತಿ (ಮಲಪ್ರಭಾ ಅಚ್ಚುಕಟ್ಟು ಪ್ರದೇಶ)	60	30	30
ಬಿ.ಟಿ. ಹತ್ತಿ–ಸಜಾತಿ (ತುಂಗಭದ್ರಾ ಅಚ್ಚುಕಟ್ಟು ಪ್ರದೇಶ)	72	36	36
ಆ. ತಳಿಗಳು	32	16	16
4. ಬೇಸಿಗೆ ಹತ್ತಿ			
ಅ. ತಳಿಗಳು	32	16	16
ಆ. ಹೈಬ್ರಿಡ್ (ಸಜಾತಿ)	48	24	24

ರಾಸಾಯನಿಕ ಗೊಬ್ಬರಗಳು

ಶಿಫಾರಸು ಮಾಡಿದ ರಾಸಾಯನಿಕ ಗೊಬ್ಬರಗಳ ಪ್ರಮಾಣ

- ಶೇ. 25 ರಷ್ಟು ಸಾರಜನಕ ಹಾಗೂ ಪೊಟ್ಯಾಷ್ ಜೊತೆಗೆ ಶೇ. 100 ರಷ್ಟು ರಂಜಕ ಪೋಷಕಾಂಶಗಳನ್ನು ಬಿತ್ತುವಾಗ, ಉಳಿದ ಶೇ. 75 ರಷ್ಟು ಸಾರಜನಕ ಹಾಗೂ ಪೊಟ್ಯಾಷ್‌ಗಳನ್ನು ಬಿತ್ತಿದಾಗಿನ 30,60, ಹಾಗೂ 90 ದಿನಗಳ ನಂತರ, ಸಮಕಂತುಗಳಲ್ಲಿ ಮೇಲು ಗೊಬ್ಬರವಾಗಿ ಒದಗಿಸಬೇಕು.

ಶಿಫಾರಸು ಮಾಡಿದ ರಸಗೊಬ್ಬರಗಳ ಮಟ್ಟ

ಪ್ರದೇಶ	ಬಿತ್ತುವಾಗ ಪ್ರಮಾಣ	ಮೇಲುಗೊಬ್ಬರ ಪ್ರಮಾಣ
ಮಳೆಯಾಶ್ರಿತ	ಶೇ.100 ಸಾ.ರಂ.ಪೊ	–
ಅರೆಮಲೆನಾಡು	ಶೇ. 50 ಸಾ. ಶೇ. 100 ರಂ.ಪೊ	ಶೇ. 50 ಸಾ. ಬಿತ್ತಿದಾಗಿನ 60 ದಿನಗಳಲ್ಲಿ
ನೀರಾವರಿ	ಶೇ. 50 ಸಾರಜನಕ ಶೇ. 100 ರಂ. ಪೊ	ಶೇ. 50 ರಂ. ಸಾ. ಮೂರು ಸಮಕಂತುಗಳಲ್ಲಿ 50,80,110 ದಿನಗಳ ನಂತರ
ವಲಯ–3	ಶೇ. 12.5 ಸಾ. ಪೊ ಶೇ. 100 ರಂ.	ಶೇ. 12.5 ಸಾ. ಪೊ. ಬಿತ್ತಿದ 25 ದಿನಗಳ ನಂತರ, ಶೇ. 50 ಸಾ. ಪೊ ಬಿತ್ತಿದ 50 ದಿನಗಳ ನಂತರ, ತಲಾ ಶೇ. 12.5 ಸಾ. ಪೊ. ಬಿತ್ತಿದ 75 ಹಾಗೂ 100 ದಿನಗಳ ನಂತರ
ಮಲೆನಾಡು	ಶೇ. 33 ಸಾ.ರಂ.ಪೊ	ಶೇ. 67 ಸಾ.ರಂ.ಪೊ ಸಮವಾಗಿ ಬಿತ್ತಿದ 60,90 ದಿನಗಳ ನಂತರ

ಬಿಟಿ ಹತ್ತಿಯಲ್ಲಿ ನಾಟಿ ಪದ್ಧತಿ

ನಾಟಿ ಪದ್ಧತಿಯಿಂದ ಹಂಗಾಮಿನ ಸದುಪಯೋಗವಾಗಿ ಸೂಕ್ತ ಸಮಯದಲ್ಲಿ ಬೇಸಾಯ ಆರಂಭಿಸಲು ಅನುಕೂಲವಾಗುತ್ತದೆ. ಈ ಪದ್ಧತಿಯಿಂದ ನಿಗದಿತ ಪ್ರಮಾಣದಲ್ಲಿ ಸಸಿ ಸಂಖ್ಯೆ ಕಾಪಾಡುವುದು ಸಾಧ್ಯವಾಗುವುದು. ಸಸಿ ತಯಾರಿಸಲು ಹಂಗಾಮು ಆರಂಭವಾಗುವ 15 ರಿಂದ 20 ದಿನ ಮುಂಚಿತವಾಗಿ 1:1 ಅನುಪಾತದಲ್ಲಿ ಮಣ್ಣು ಮತ್ತು ಕಳಿತ ಗೊಬ್ಬರ ತುಂಬಿ ಹದಗೊಳಿಸಿ ಮಾಡಿದ 5 x 4 ಗಾತ್ರದ ಪಾಲಿಥೀನ್ ಚೀಲದಲ್ಲಿ ಬಿಟಿ ಹತ್ತಿ ಬೀಜಗಳನ್ನು ಬಿತ್ತನೆ ಮಾಡಬೇಕು. 25 ರಿಂದ 30 ದಿನಗಳ ಅವಧಿಯ ಸಸಿಗಳನ್ನು ಹದವಾದ ಮಳೆಯಾದ ತಕ್ಷಣ ಅಥವಾ ಮಳೆ ಇಲ್ಲದಿದ್ದಲ್ಲಿ ನೀರನ್ನು ಹಾಯಿಸಿ ಸಸಿಗಳನ್ನು 90 ಸೆಂ.ಮೀ. x 90 ಸೆಂ.ಮೀ. (ಆಳವಾದ ಕಪ್ಪು ಮಣ್ಣು) ಅಥವಾ 90 ಸೆಂ.ಮೀ. x 60 ಸೆಂ.ಮೀ. (ಮಧ್ಯಮ ಆಳವಾದ ಕಪ್ಪು ಮಣ್ಣು) ಅಂತರದಲ್ಲಿ ಸಸಿಗಳ ಬೇರಿಗೆ ಧಕ್ಕೆಯಾಗದಂತೆ ಮಣ್ಣು ಸಹಿತ ನಾಟಿ ಮಾಡಬೇಕು.

ನೀರಾವರಿ

ಮಣ್ಣು ಹಾಗೂ ಹವಾಮಾನಕ್ಕನುಗುಣವಾಗಿ ಮರಳು ಮಿಶ್ರಿತ ಮಣ್ಣಿನಲ್ಲಿ 10 ರಿಂದ 15 ದಿನಗಳಿಗೊಮ್ಮೆ ಮತ್ತು ಕಪ್ಪು ಮಣ್ಣಿನಲ್ಲಿ 20 ರಿಂದ 30 ದಿನಗಳಿಗೊಮ್ಮೆ ನೀರು ಹಾಯಿಸಬೇಕು. ಬಿತ್ತನೆ ಮಾಡುವಾಗ, ಹದ ಬರುವುದಕ್ಕೆ ಮೊದಲು 2 ಬಾರಿ ಮತ್ತು ಹದ ಬಂದ ನಂತರ ನಾಲ್ಕು ಬಾರಿ ಕಡ್ಡಾಯ ನೀರು ಹಾಯಿಸಬೇಕು. ಆಳವಾದ ಕಪ್ಪು ಮಣ್ಣಿನ ಪ್ರದೇಶಗಳಲ್ಲಿ ಸರದಿಯಾಗಿ 'ಸಾಲು ಬಿಟ್ಟು ಸಾಲು' ನೀರು ಹಾಯಿಸುವುದು ಸೂಕ್ತ. ಕಪ್ಪು ಮಣ್ಣಿನ ಪ್ರದೇಶದಲ್ಲಿ ನೀರು ಇಂಗದೆ ಇದ್ದಾಗ ಬಸಿಗಾಲುವೆಗಳನ್ನು ತೆಗೆಯುವುದು ಅವಶ್ಯ. ಹತ್ತಿಗೆ ಹೆಚ್ಚಿನ ನೀರಿನ ಅವಶ್ಯಕತೆ ಇರುವುದಿಲ್ಲ. ಹೆಚ್ಚು ನೀರು ಕೊಡುವುದರಿಂದ ಗಿಡಗಳ ಬೆಳವಣಿಗೆ ಹೆಚ್ಚಾಗಿ ಕೀಟನಾಶಕಗಳ ಸಮರ್ಪಕ ಬಳಕೆಯಾಗದೆ ಕೀಟ ಬಾಧೆ ಹೆಚ್ಚಾಗುತ್ತದೆ. ಅಚ್ಚುಕಟ್ಟು ಪ್ರದೇಶದಲ್ಲಿ ನೀರನ್ನು ಕಡಿಮೆ ಬಳಸಿ ಸಂದರ್ಭಗಳಲ್ಲಿ ಕೊಳವೆಬಾವಿಗಳ ಬಾವಿಗಳಿಂದ ನೀರನ್ನು ಹಾಯಿಸಿ ಬೆಳೆ ಬೆಳೆಯಬೇಕು ಹತ್ತಿಯಲ್ಲಿ ಹನಿ ನೀರಾವರಿಯನ್ನು ಅಂತಹ ಪ್ರದೇಶಗಳಲ್ಲಿ ಕೊನೆಯ ನೀರು ಹಾಯಿಸಿದ ಮೂರು ದಿನಗಳ ನಂತರ ಪ್ರತಿ ಲೀಟರ್ ನೀರಿಗೆ 60 ಗ್ರಾಂ. ಕಯೋಲಿನ್ ಮತ್ತೊಂದಿಗೆ 1 ಗ್ರಾಂ. ಟೀಪಾಲ್ ಅಥವಾ 1 ಗ್ರಾಂ ಸಾಬೂನಿನ ಪುಡಿ ಮಿಶ್ರಣ ಮಾಡಿ ಸಿಂಪಡಿಸಬೇಕು. ಧೂಮಯ ಅಂತರಾಳ ಮತ್ತು 95 ಸೆಂ.ಮೀ. ಗಿಂತ ಅಧಿಕವಾದ ಮತ್ತು 6 ಡಿ.ಎಸ್/ಮೀ. ವರೆಗೆ ಸವಳಿನ ಪ್ರದೇಶಗಳಲ್ಲಿ ಹತ್ತಿ ಬೆಳೆಗೆ 12 ರಿಂದ 15 ದಿನಗಳಿಗೊಮ್ಮೆ ನೀರು ಹಾಯಿಸಬೇಕು.

ಅಂತರ ಬೇಸಾಯ ಹಾಗೂ ಕಳೆನಿಯಂತ್ರಣ

ಬಿತ್ತಿದ 60 ದಿನಗಳವರೆಗೆ ಕಳೆಗಳನ್ನು ಹತೋಟಿಯಾಗಿ ಹತೋಟಿಯಲ್ಲಿಡುವುದು ಅವಶ್ಯ. ಬಿತ್ತಿದ ದಿನ ಅಥವಾ ಮರುದಿನ ಪ್ರತಿ ಎಕರೆಗೆ 500 ಗ್ರಾಂ. ಡೈಯುರಾನ್ 80 ಡಬ್ಲ್ಯು.ಪಿ. ಅಥವಾ 2 ಲೀ. ಪೆಂಡಿಮಿಥಲಿನ್ 30 ಇ.ಸಿ. ಅಥವಾ 700 ಮಿ.ಲೀ. ಪೆಂಡಿಮಿಥಲಿನ್ 38.7 ಸಿ.ಎಸ್ ಕಳೆನಾಶಕವನ್ನು 300 ಲೀ. ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು. ಬಿತ್ತಿದ 25–30 ದಿನಗಳ ನಂತರ ಎಕರೆಗೆ 300 ಮಿ.ಲೀ. ಕ್ವಿಜಾಲೋಫಾಪ್ ಇಥೈಲ್ (5% ಇ.ಸಿ) ಹಾಗೂ 300 ಮಿ.ಲೀ. ಪೈರಿಥಿಯೋಬ್ಯಾಕ್ ಸೋಡಿಯಂ 10 ಇ.ಸಿ. ಕಳೆನಾಶಕಗಳನ್ನು 300 ಲೀ. ನೀರಿನಲ್ಲಿ ಮಿಶ್ರಣಮಾಡಿ ಬೆಳೆಯಿದ್ದಾಗ ಕಳೆಗಳ ಮೇಲೆ ಸಿಂಪಡಿಸುವುದರಿಂದ ಏಕದಳ ಮತ್ತು ದ್ವಿದಳ ಜಾತಿಯ ಕಳೆಗಳನ್ನು ನಿಯಂತ್ರಣ ಮಾಡಬಹುದು.

ಲಾಭದಾಯಕ ಅಂತರಬೆಳೆ ಪದ್ಧತಿಗಳು

ಒಣ ಬೇಸಾಯದಲ್ಲಿ ಇರುವ ಹತ್ತಿ ಬೆಳೆಗಳ, ಹತ್ತಿ + ಈರುಳ್ಳಿ (1:5), ಹತ್ತಿ+ ಸೋಯಾಅವರೆ (1:1), ಹತ್ತಿ+ ಸೋಯಾಅವರೆ (1:1), ಹತ್ತಿ + ಬೀನ್ಸ್ (1:1), ಹತ್ತಿ + ಶೇಂಗಾ (1:2), ಹೈಬ್ರಿಡ್ ಬಿಟಿ ಹತ್ತಿ+ಶೇಂಗಾ (1:2) ನೀರಾವರಿಯಲ್ಲಿ ಹತ್ತಿ + ಸೋಯಾಅವರೆ (1:3), ಹತ್ತಿ + ಮೆಣಸಿನಕಾಯಿ (1:1) ಹಾಗೂ ಹತ್ತಿ + ಈರುಳ್ಳಿ (1:5).

ಸಿಂಪರಣೆಯಿಂದ ಲಘು ಪೋಷಕಾಂಶಗಳ ಪೂರೈಕೆ

- ಬಿತ್ತನೆಯಾದ 80 ದಿನಗಳ ನಂತರ 20 ದಿನಗಳಿಗೊಮ್ಮೆ ಎರಡು ಬಾರಿ ಶೇ. 2 ರ ಯೂರಿಯಾ ಅಥವಾ ಶೇ. 1.0 ಪೊಟ್ಯಾಸಿಯಮ್ ನೈಟ್ರೇಟ್ ದ್ರಾವಣವನ್ನು ಸಿಂಪರಣೆ ಮಾಡಬೇಕು
- ಇದಲ್ಲದೇ ರೂಪದ ಶೇ. 0.5 ಸತುವಿನ ಸಲ್ಫೇಟ್, ಶೇ. 0.5 ಕಬ್ಬಿಣದ ಸಲ್ಫೇಟ್, ಶೇ. 0.5 ಮ್ಯಾಂಗನೀಸ್ ಸಲ್ಫೇಟ್ ಮತ್ತು ಶೇ. 1.0 ಮೆಗ್ನೀಶಿಯಂ ಸಲ್ಫೇಟ್‌ನ ಮಿಶ್ರಣವನ್ನು ಹೂಕಾಯುವ ಹಂತದಲ್ಲಿ ಎರಡುಬಾರಿ ಸಿಂಪರಣೆಯನ್ನು (ಹತ್ತು ದಿನಗಳ ಅಂತರದಲ್ಲಿ) ಕೈಗೊಳ್ಳಬೇಕು
- ಬೆಳೆಯು ಹೂ ಬಿಡಲು ಪ್ರಾರಂಭವಾದಾಗ ಮತ್ತು ಕೊನೆಗೆ ಹೂ ಅರಳಿದಾಗ ಪ್ರತಿ ಲೀಟರ್ ನೀರಿಗೆ 0.25 ಮಿ.ಲೀ. ಆಲ್ಫಾ–ನ್ಯಾಫ್ತಲೀನ್ ಅಸಿಟಿಕ್ ಆಸಿಡ್ 4.5% ಎಸ್.ಎಲ್. ಬೆರೆಸಿ ಸಿಂಪಡಿಸಬೇಕು. ಪ್ರತಿ ಎಕರೆಗೆ 320 ರಿಂದ 400 ಲೀ. ದ್ರಾವಣ ಬಳಸಬೇಕು. ಇದರಿಂದ ಮೊಗ್ಗು, ಹೂ, ಕಾಯಿ ಉದುರುವಿಕೆ ಕಡಿಮೆಯಾಗುವುದು
- ವಲಯ 3 ರಲ್ಲಿ ಬಿ.ಟಿ ಹತ್ತಿ ಬೆಳೆಯು 70 ಹಾಗೂ 90 ದಿನಗಳಿದ್ದಾಗ ಶೇ. 1.0 ರ ಮೆಗ್ನೀಶಿಯಂ ಸಲ್ಫೇಟ್ ಜೊತೆಗೆ ಶೇ. 2 ರ ಯೂರಿಯಾ ಸಿಂಪಡಿಸಬೇಕು



ಸಸ್ಯ ಸಂರಕ್ಷಣಾ ಕ್ರಮಗಳು

ಪ್ರಮುಖ ರಸ ಹೀರುವ ಕೀಟಗಳು

ಜಿಗಿ ಹುಳು: ಬಿತ್ತಿದ 15–20 ದಿನಗಳಲ್ಲಿ ಕಂಡು ಬರುತ್ತವೆ. ಎಲೆಗಳ ಕೆಳಗೆ ಅಚ್ಚಹಸಿರಾಗಿ ಕಾಣಿಸುವ ಪ್ರೌಢ ಮತ್ತು ಮರಿ ಹುಳುಗಳು ರಸ ಹೀರುವುದರಿಂದ ಎಲೆಯ ಅಂಚುಗಳು ಮೊದಲು ಹಳದಿ ಬಣ್ಣಕ್ಕೆ ತಿರುಗಿ ನಂತರ ಕೆಂಪಾಗುತ್ತವೆ. ಬಾಧೆಯು ಹೆಚ್ಚಾದಲ್ಲಿ ಎಲೆಗಳು ಒಣಗುತ್ತವೆ.



ಥ್ರಿಪ್ಸ್ ನುಸಿ: ಚಿಕ್ಕ ಗಾತ್ರದ ಪ್ರೌಢ ಮತ್ತು ಮರಿ ಥ್ರಿಪ್ಸ್ ಹುಳುಗಳು ಎಲೆಯ ಕೆಳಗಡೆಯಿಂದ ರಸಹೀರುವುದರಿಂದ ಎಲೆಗಳು ಮೊದಲು ಬಿಳಿ ಬಣ್ಣಕ್ಕೆ ತಿರುಗುತ್ತವೆ. ಬಾಧೆ ಹೆಚ್ಚಾದಂತೆ ಎಲೆಗಳು ಮುರುಟಿ ಹರಿಯುವುದು ತೀವ್ರ ಬಾಧೆಯ ಲಕ್ಷಣವಾಗಿರುತ್ತದೆ.

ಹೇನು: ಬೆಳೆಯು ಚಿಕ್ಕದಿರುವಾಗ ಈ ಕೀಟಗಳ ಬಾಧೆಯು ಪ್ರಾರಂಭವಾಗುತ್ತದೆ. ಪ್ರೌಢ ಮತ್ತು ಮರಿ ಹೇನುಗಳು ಎಲೆಗಳ ಕೆಳಗಡೆ ರಸ ಹೀರಿ ಸಿಹಿ ಪದಾರ್ಥಗಳನ್ನು ಎಲೆಯ ಮೇಲೆ ಸ್ರವಿಸುವುದರಿಂದ ಕಪ್ಪು ಬಣ್ಣದ ಬೂಷ್ಟು ಬೆಳೆದು ಎಲೆಗಳು ಕಪ್ಪಾಗುತ್ತವೆ. ಇವುಗಳ ಬಾಧೆ ತಂಪು ವಾತಾವರಣದಲ್ಲಿ (ನವೆಂಬರ್/ಡಿಸೆಂಬರ್) ಇನ್ನೂ ತೀವ್ರವಾಗುತ್ತದೆ.

ನಿರ್ವಹಣಾ ಕ್ರಮಗಳು:

ಮೊದಲ ಹಂತದಲ್ಲಿ ಬರುವ ರಸ ಹೀರುವ ಕೀಟಗಳ ನಿಯಂತ್ರಣಕ್ಕಾಗಿ ಬೀಜೋಪಚಾರ ಮಾಡಿದ ಬಿಟಿ ಹತ್ತಿ ಬೀಜಗಳನ್ನು ಉಪಯೋಗಿಸುವುದರಿಂದ 30–40 ದಿನಗಳವರೆಗೆ ಯಾವುದೇ ಕೀಟನಾಶಕ ಸಿಂಪರಣೆ ಅವಶ್ಯಕತೆ ಬರುವುದಿಲ್ಲ. ಬೀಜೋಪಚಾರ ಮಾಡದ ಬೀಜಗಳಿಗೆ ಬಿತ್ತನೆಗೆ ಮುಂಚೆ ಪ್ರತಿ ಕಿ. ಗ್ರಾಂ. ಬೀಜವನ್ನು 10 ಗ್ರಾಂ. ಇಮಿಡಾಕ್ಲೋಪ್ರಿಡ್ 70 ಡಬ್ಲ್ಯು.ಎಸ್. ಅಥವಾ 5 ಗ್ರಾಂ. ಥಯಾಮಿಥಾಕ್ಸಾಮ್ 70 ಡಬ್ಲ್ಯು.ಎಸ್‌ನಿಂದ ಬೀಜೋಪಚಾರ ಮಾಡುವುದರಿಂದ ಮೊದಲ ಹಂತದಲ್ಲಿ ಬರುವ ರಸ ಹೀರುವ ಕೀಟಗಳನ್ನು 35–40 ದಿನಗಳವರೆಗೆ ನಿಯಂತ್ರಿಸಬಹುದು.



ಕೀಟನಾಶಕ ಸಿಂಪರಣೆ:

ಅವಶ್ಯವಿದ್ದಲ್ಲಿ ಕೀಟಗಳ ಸಂಖ್ಯೆ ಆರ್ಥಿಕ ನಷ್ಟವನ್ನು ಮೀರಿದಾಗ ಶೇ. 5 ರ ಬೇವಿನ ಬೀಜದ ಕಷಾಯ ಅಥವಾ ಬೇವಿನ ಕೀಟನಾಶಕ ಅಥವಾ ಅಂತರವ್ಯಾಪಿ ಕೀಟನಾಶಕಗಳಾದ 1.0 ಮಿ.ಲೀ. ಫಿಪ್ರೋನಿಲ್ 5% ಎಸ್.ಸಿ ಅಥವಾ 0.2 ಗ್ರಾಂ. ಥೈಯಾಮಿಥಾಕ್ಸಾಮ್ 25 ಡಬ್ಲ್ಯು.ಜಿ. ಒಂದು ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.

[illegible] ರಸ ಹೀರುವ ಕೀಟಗಳು [illegible] ಲಕ್ಷಣಗಳು :

ಎಲೆ ಸುರುಳಿ ತಿಗಣೆ: ಬೆಳೆಯು 2–3 ಎಲೆಗಳ ಹಂತದಲ್ಲಿ ಇದ್ದಾಗ ಹಾನಿಯು ಪ್ರಾರಂಭವಾಗುತ್ತದೆ. ಕೀಟವು ಹಾನಿಗೆ ಆಕಾರದಲ್ಲಿ ಸುರುಳಿ ಹೊರಡುವುದರಿಂದ ಎಲೆಗಳು ಬೆಳ್ಳಗೆ ಕಾಣುತ್ತವೆ. ಬೆಳೆಯು 40–50 ದಿನಗಳವರೆಗೆ ಈ ಕೀಟದ ಬಾಧೆ ಕಾಣಿಸಿಕೊಳ್ಳುತ್ತದೆ.

ನಿರ್ವಹಣಾ ಕ್ರಮಗಳು: ಬಾಧೆ ತೀವ್ರವಾಗಿದ್ದಲ್ಲಿ ಮೇಲೆ ಸೂಚಿಸಿದ ಯಾವುದಾದರೊಂದು ಅಂತರವ್ಯಾಪಿ ಕೀಟನಾಶಕವನ್ನು ಉಪಯೋಗಿಸಬಹುದು.

ಬಿಳಿ ನೊಣ: ಬೆಳೆಯು 50 ದಿನಗಳಿಂದ ಪ್ರಾರಂಭವಾಗುತ್ತದೆ. ಪ್ರೌಢ ಕೀಟಗಳು ಎಲೆಯ ಕೆಳಭಾಗದಲಿ ಮತ್ತು ಮರಿ ಕೀಟಗಳು ಮಧ್ಯಭಾಗದಿಂದ ರಸ ಹೀರುವುದರಿಂದ ಎಲೆಗಳು ಹಳದಿಯಾಗುತ್ತವೆ. ಕೀಟಗಳು ಸಿಹಿ ಪದಾರ್ಥವನ್ನು ಎಲೆಗಳ ಮೇಲೆ ಸ್ರವಿಸುವುದರಿಂದ ಕಪ್ಪು ಬಣ್ಣ ಬೆಳೆದು ಎಲೆಗಳಲ್ಲಿ ಆಹಾರ ಉತ್ಪಾದನೆ ಕಡಿಮೆ ಆಗುತ್ತದೆ. ಇದರಿಂದ ಮೊಗ್ಗು ಮತ್ತು ಸಣ್ಣ ಕಾಯಿಗಳು ಉದುರುತ್ತವೆ.

ನಿರ್ವಹಣಾ ಕ್ರಮಗಳು: ಪ್ರತಿ ಎಕರೆಗೆ 20 ರಂತೆ ಹಳದಿ ಬಣ್ಣದ ಅಂಟಿನ ಬಲೆಗಳನ್ನು ಬೆಳೆಯ ಎತ್ತರಕ್ಕೆ ನೆಡಬೇಕು. ಶೇ. 5 ರ ಬೇವಿನ ಬೀಜದ ಕಷಾಯ ಅಥವಾ ಬೇವಿನ ಕೀಟನಾಶಕ ಅಥವಾ 1.5 ಮಿ. ಲೀ. ಟ್ರೈಜೋಫಾಸ್ 40 ಇ. ಸಿ. ಕೀಟನಾಶಕಗಳನ್ನು ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಬಿಳಿ ನೊಣದ ಬಾಧೆ ಕಂಡು ಬಂದಲ್ಲಿ ಹಳದಿ ಬಣ್ಣದ ಅಂಟಿನ ಬಲೆಗಳನ್ನು (ಎಕರೆಗೆ 10 ರಂತೆ) ಬೆಳೆಯ ಎತ್ತರಕ್ಕೆ ನೆಡಬೇಕು. ಬಿಳಿ ನೊಣದ ನಿಯಂತ್ರಣಕ್ಕಾಗಿ ಶೇ.5 ರ ಬೇವಿನ ಕೀಟನಾಶಕ ಅಥವಾ 1.5 ಮಿ.ಲೀ. ಟ್ರೈಜೋಫಾಸ್ 40 ಇ.ಸಿ. ಕೀಟನಾಶಕವನ್ನು ಬಿಳಿ ನೊಣಗಳ ಸಂಖ್ಯೆ ಆಧರಿಸಿ ಸಿಂಪಡಿಸಬೇಕು.

ಮೈಟ್ ನುಸಿ: ಮೈಟ್ ನುಸಿಗಳು ಸಾಮಾನ್ಯವಾಗಿ ಬೆಳೆಯ ಕೊನೆ ಹಂತದಲ್ಲಿ ಬರುತ್ತವೆ. ಇವು ಕೆಂಪುಬಣ್ಣದ ಎಲೆಗಳ ಕೆಳಗಡೆ ಉಳಿದು ರಸ ಹೀರುವವು.

ನಿರ್ವಹಣಾ ಕ್ರಮಗಳು: ಪ್ರತಿ ಲೀ. ನೀರಿಗೆ 2.50 ಗ್ರಾಂ. ಡೈಕೋಫಾಲ್ 18.5 ಇ.ಸಿ. ಬೆರೆಸಿ ಸಿಂಪಡಿಸಬೇಕು. ಮೈಟ್ ನುಸಿ ಕಂಡು ಬಂದರೆ ಪ್ರತಿ ಲೀ. ನೀರಿಗೆ 3 ಗ್ರಾಂ. ನೀರಿನಲ್ಲಿ ಕರಗುವ ಗಂಧಕ ಅಥವಾ 2.5 ಮಿ.ಲೀ. ಡೈಕೋಫಾಲ್ 18.5 ಇ.ಸಿ. ಬೆರೆಸಿ ಸಿಂಪಡಿಸಬೇಕು.

ಮೊಗ್ಗೆ ಮಾರಿ ತಿಗಣೆ/ಬೆಂಕಿ ಹುಳು: ಸಾಮಾನ್ಯವಾಗಿ ಹತ್ತಿ ಮೊಗ್ಗು ಬಿಡುವ ಹಂತದಲ್ಲಿ ಈ ಕೀಟದ ಬಾಧೆ ಪ್ರಾರಂಭವಾಗುತ್ತದೆ. ಪ್ರೌಢ ಬೆಂಕಿ ಹುಳು ಮೊಗ್ಗಿನಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಬಾಧಿತ ಮೊಗ್ಗು ಮತ್ತು ಹೂವುಗಳು ಒಳಗಿನಿಂದ ಕೊಳೆಯುತ್ತವೆ. ಒಣಗಿದ ಮೊಗ್ಗು ಹಾಗೂ ಹೂವುಗಳನ್ನು ಗಿಡದ ಮೇಲೆ ಕಾಣಬಹುದು. ಮೊಗ್ಗು ಮತ್ತು ಹೂವು ಉದುರುವಿಕೆಯೂ ಸಹ ಈ ಕೀಟದ ಬಾಧೆಯ ಲಕ್ಷಣವಾಗಿರುತ್ತದೆ.

ನಿರ್ವಹಣಾ ಕ್ರಮಗಳು: ಪ್ರತಿ ಲೀಟರ್ ನೀರಿಗೆ 2.0 ಮಿ. ಲೀ. ಮೆಲಾಥಿಯಾನ್ 50 ಇ. ಸಿ. ಬೆರೆಸಿ ಮೊಗ್ಗು ಬಿಡುವ ಹಂತದಲ್ಲಿ ಸಿಂಪಡಿಸಬೇಕು.

ಹತ್ತಿ ತಿಗಣೆಗಳು

ಬೂದಿ ತಿಗಣೆ: ಪ್ರೌಢ ಮತ್ತು ಮರಿ ತಿಗಣೆಗಳು ಗಿಡದ ಕುಡಿ, ಮೊಗ್ಗು, ಎಲೆಯ ಎಲೆ ಮತ್ತು ಚಿಕ್ಕ ಗಾತ್ರದ ಕಾಯಿಗಳಿಂದ ರಸ ಹೀರುತ್ತವೆ. ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಮೊಗ್ಗು ಹಾಗೂ ಸಣ್ಣ ಕಾಯಿಗಳು ಉದುರುತ್ತವೆ. ಬಾಧಿತ ಕಾಯಿಗಳ ಮೇಲೆ ಕಪ್ಪು ಕಲೆಗಳು ಕಂಡು ಬಂದು, ಗಿಡೆ ಮುಚ್ಚಿಗೆ ಆಕಾರ ಹೊಂದುತ್ತವೆ. ಕಾಯಿಗಳು ಇಡಿಯಾಗುತ್ತವೆ. ಬೆಳೆಯ 55–120 ದಿನಗಳವರೆಗೂ ಕಂಡುಬರುತ್ತವೆ.

ನಿರ್ವಹಣೆ: 2.0 ಮಿ. ಲೀ. ಪ್ರೊಫೆನೋಫಾಸ್ 50 ಇ. ಸಿ. ಅಥವಾ 1.0 ಗ್ರಾಂ. ಅಸಿಫೇಟ್ 75 ಎಸ್.ಪಿ. ಅಥವಾ 1.0 ಮಿ. ಲೀ. ಫಿಪ್ರೋನಿಲ್ 5 ಎಸ್. ಸಿ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಬೆಳೆಯಲ್ಲಿ ಮಿರಿಡ್ ತಿಗಣೆಗಳ ಬಾಧೆ ಕಂಡು ಬಂದಾಗ 1.0 ಗ್ರಾಂ. ಅಸಿಫೇಟ್ 70 ಎಸ್. ಪಿ. ಕೀಟನಾಶಕವನ್ನು ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು. 100–120 ದಿನಗಳ ವರೆಗೆ 1.0 ಗ್ರಾಂ. ಥೈಯೋಡಿಕಾರ್ಬ್ 75 ಡಬ್ಲ್ಯು.ಪಿ. ಕೀಟನಾಶಕವನ್ನು ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು. ಪ್ರತಿ ಎಕರೆಗೆ 400 ಲೀ. ಸಿಂಪರಣಾ ದ್ರಾವಣ ಬೇಕಾಗುತ್ತದೆ. ಇದರಿಂದ ಹಿರಿಯೋಡಿಸ್ ಮತ್ತು ಗುಲಾಬಿ ಕಾಯಿಕೊರಕ ಕೀಟಗಳನ್ನು ಸಮರ್ಪಕವಾಗಿ ನಿರ್ವಹಿಸಬಹುದು.

ಕೆಂಪು ತಿಗಣೆ ಹಾಗೂ ಬೂದು ಬಣ್ಣದ ತಿಗಣೆ: ಬೆಳೆಯ ಕೊನೆ ಹಂತದಲ್ಲಿ ಕಾಣಿಸಿಕೊಂಡು ಕಾಯಿಗಳಿಂದ ರಸ ಹೀರುವುದರಿಂದ ಕಾಯಿ ಸರಿಯಾಗಿ ಒಡೆಯುವುದಿಲ್ಲ. ಹತ್ತಿಯು ಕಲೆಯಾಗಿ, ಹತ್ತಿ ಮತ್ತು ಬೀಜದ ಗುಣಮಟ್ಟ ಕಡಿಮೆಯಾಗುತ್ತದೆ.

ನಿರ್ವಹಣೆ: ಮೇಲೆ ತಿಳಿಸಿದ ಯಾವುದಾದರೂ ಸಂಪರ್ಕ ಕೀಟನಾಶಕವನ್ನು ಬಳಸಿ ಹತೋಟಿ ಮಾಡಬಹುದು.

ಹಿಟ್ಟು ತಿಗಣೆ: ಅಪ್ಸರೆ ಮತ್ತು ಪ್ರೌಢ ಕೀಟಗಳು ಎಲೆ, ಕಾಯಿ, ಬೇರು ಮುಂತಾದ ಭಾಗಗಳಿಂದ ರಸ ಹೀರುವುದಲ್ಲದೆ ತಮ್ಮ ದೇಹದಿಂದ ಸಿಹಿ ಪದಾರ್ಥಗಳನ್ನು ಸ್ರವಿಸುವುದರಿಂದ ಕಪ್ಪುಬಣ್ಣದ ಶಿಲೀಂಧ್ರದ ಬೂಷ್ಟು ಬೆಳೆದು ದ್ಯುತಿಸಂಶ್ಲೇಷಣೆ ಕ್ರಿಯೆಯಲ್ಲಿ ವ್ಯತ್ಯಯವಾಗಿ ಗಿಡದ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

ನಿರ್ವಹಣೆ: ಹಿಟ್ಟು ತಿಗಣೆಯ ಹತೋಟಿಗಾಗಿ 1.0 ಮಿ. ಲೀ. ಬುಪ್ರೊಫೆಜಿನ್ 25 ಎಸ್.ಸಿ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

3. ಕಾಂಡಕೊರೆಯುವ ಮುಖ ಹುಳು ಬಾಧೆಯ ಲಕ್ಷಣಗಳು ಹಾಗೂ ನಿರ್ವಹಣಾ ಕ್ರಮಗಳು

ಕಾಂಡಕೊರೆಯುವ ಮುಖ ಹುಳು: ಪ್ರೌಢ ಚಿಟ್ಟೆಗಳು ಕಾಂಡದ ಮೇಲೆ ಮೊಟ್ಟೆ ಇಡುತ್ತವೆ. ಮರಿ ಹುಳುಗಳು ಕಾಂಡ ಕೊರೆದು ಒಳಗೆ ಸೇರಿ ಕಾಂಡದ ತಿರುಳನ್ನು ತಿಂದು ಅಲ್ಲಿಯೇ ಕೋಶಾವಸ್ಥೆ ಹಾಗೂ ಪ್ರೌಢಾವಸ್ಥೆ ತಲುಪುತ್ತದೆ. ಬಾಧೆಗೊಳಗಾದ ಗಿಡಗಳ ಕಾಂಡವು ಟೊಳ್ಳಾಗುವುದರಿಂದ ಗಿಡಗಳು ಮುರಿದು ಬೀಳುತ್ತವೆ.

ನಿರ್ವಹಣೆ

- ಮಳೆಯಾಶ್ರಿತ ಹತ್ತಿಯಲ್ಲಿ ಪ್ರತಿ 20 ಹತ್ತಿ ಸಾಲಿನ ನಂತರ ಒಂದು ಸಾಲು ಬೆಂಡೆಯನ್ನು ಬಲೆ ಬೆಳೆಯಾಗಿ ಬೆಳೆಯಬೇಕು. ಪ್ರತಿದಿನ ಮುಂಜಾನೆ ಸಮಯದಲ್ಲಿ ಕಾಂಡ ಕೊರೆಯುವ ದುಂಬಿಗಳನ್ನು ಬೆಂಡಿ ಗಿಡಗಳ ಮೇಲೆ ಎತ್ತಿ ಕೈಯಿಂದ ಆರಿಸಿ ತೆಗೆದು ನಾಶಪಡಿಸಬೇಕು. ನಂತರ ಬೆಂಡಿ ಕಾಯಿಗಳ ಮೇಲೆ ಕಾಯಿಕೊರಕ ಪತಂಗದ ಮೊಟ್ಟೆಗಳಿರುವುದನ್ನು ಗಮನಿಸಿ ಬೆಂಡಿ ಗಿಡದ ಕಾಯಿಗಳನ್ನು ಹರಿದು ನಾಶಪಡಿಸಬೇಕು. ಇದರಿಂದ ಹತ್ತಿ ಬೆಳೆಯ ಮೇಲೆ ಕಾಯಿಕೊರಕಗಳ ಒತ್ತಡ ಕಡಿಮೆಗೊಳಿಸಬಹುದು.
- ಪ್ರತಿ 20 ಸಾಲು ಹತ್ತಿಗೆ ಒಂದು ಸಾಲು ಬೆಂಡೆಯನ್ನು ಬಿತ್ತಬೇಕು. ಮುಂಜಾನೆ ವೇಳೆಯಲ್ಲಿ ಬೆಂಡಿ ಗಿಡಗಳ ಮೇಲೆ ಕಂಡು ಬರುವ ಪ್ರೌಢಮುಖಿ ಹುಳುಗಳನ್ನು ಆರಿಸಿ ನಾಶಪಡಿಸಬೇಕು. ಅಥವಾ ಪ್ರೊಫೆನೋಫಾಸ್ 50 ಇ.ಸಿ. 2 ಮಿ.ಲೀ. + 0.5 ಮಿ.ಲೀ. ಡಿ.ಡಿ.ವಿ.ಪಿ. 76 ಇ.ಸಿ. ಮಿಶ್ರಣವನ್ನು ಪ್ರೌಢ ಕೀಟದ ಚಟುವಟಿಕೆ ಅಥವಾ ಬಾಧೆ ಕಂಡುಬಂದಾಗ ಸಿಂಪಡಿಸಬೇಕು.

4. ಕಾಯಿಕೊರಕಗಳ ಬಾಧೆಯ ಲಕ್ಷಣಗಳು ಹಾಗೂ ನಿರ್ವಹಣಾ ಕ್ರಮಗಳು:

ಚುಕ್ಕೆ ಕಾಯಿ ಕೊರಕ: ಬೆಳೆಯ 35–40 ದಿನಗಳಾದಾಗ ಕೀಟಗಳು ಪಕ್ವದ ಕುಡಿಯನ್ನು ಕೊರೆಯುವುದರಿಂದ ಬೆಳವಣಿಗೆ ಕುಂಠಿತವಾಗಿ ಕವಲುಗಳ ಸಂಖ್ಯೆ ಹೆಚ್ಚಾಗುತ್ತದೆ. ನಂತರ ಕೀಡೆಗಳು ಹೂ, ಮೊಗ್ಗು ಮತ್ತು ಕಾಯಿಗಳಲ್ಲಿ ರಂಧ್ರ ಕೊರೆದು ತಿಂದು ನಾಶಪಡಿಸುತ್ತವೆ. ಇದರಿಂದಾಗಿ ಮೊಗ್ಗಿನ ಪಕಳೆಗಳು ಅಗಲವಾಗಿ ನಂತರ ಉದುರುತ್ತವೆ.

ಹೆಲಿಕೋವರ್ಪಾ ಅಥವಾ ಅಮೆರಿಕನ್ ಕಾಯಿಕೊರಕ: ಕೀಡೆಗಳು ಹತ್ತಿಯ ಮೊಗ್ಗು ಮತ್ತು ಬೆಳವಣಿಗೆ ಹಂತದ ಕಾಯಿಗಳಲ್ಲಿ ರಂಧ್ರಗಳನ್ನು ಕೊರೆದು ತಮ್ಮ ದೇಹದ ಅರ್ಧ ಭಾಗವನ್ನು ರಂಧ್ರದಲ್ಲಿ ತೂರಿಸಿ ತಿರುಳನ್ನು ತಿಂದು ನಾಶಪಡಿಸುತ್ತವೆ. ಬಾಧಿತ ಮೊಗ್ಗಿನ ಪಕಳೆಗಳು ಅಗಲವಾಗಿ ನಂತರ ಉದುರುತ್ತವೆ.

ನಿರ್ವಹಣಾ ಕ್ರಮಗಳು:

- ಕಾಯಿಕೊರಕ ಕೀಟಗಳ ಸಮೀಕ್ಷೆ ಮಾಡಲು 40 ದಿನದ ಬೆಳೆಯಲ್ಲಿ ಪ್ರತಿ ಹೆಕ್ಟೇರಿಗೆ ಐದು ಮೋಹಕ ಬಲೆಗಳನ್ನು 50 ಮೀಟರ್ ಅಂತರದಲ್ಲಿ ನೆಡಬೇಕು. ಹದಿನೈದು ದಿನಕ್ಕೊಮ್ಮೆ ರಂಗಾಕರ್ಷಕ ವಸ್ತುವನ್ನು (ಲ್ಯೂರ್) ಬದಲಾಯಿಸಬೇಕು
- ಬೆಳೆಯ 80–90 ದಿನಗಳವರೆಗಿನಲ್ಲಿ ಕುಡಿ ಚಿವುಟಿ ತೆಗೆಯುವುದರಿಂದ ಕಾಯಿಕೊರಕಗಳ ತತ್ತಿಗಳು ಮೊಟ್ಟೆ ಇಡುವುದನ್ನು ಕಡಿಮೆಗೊಳಿಸಿ ಕೀಟದ ಹಾವಳಿಯನ್ನು ನಿಯಂತ್ರಿಸಬಹುದು.
- ಹಿಲಿಯೋಥಿಸ್ ಕೀಟದ ನಿರೋಧಕ ಶಕ್ತಿಯನ್ನು ತಡೆಯಲು ನೂತನ ಗುಂಪಿನ ರಿಂದ 0.5 ಮಿ. ಲೀ. ಇಂಡಾಕ್ಸಾಕಾರ್ಬ್ 14.5 ಎಸ್.ಸಿ.